# ಗ್ರಾಮೀಣ ಜನಪದರ ಆಟಗಳು:

**ಪ್ರೊ. ಜಗನ್ನಾಥ ಎನ್**

ಸಹಾಯಕ ಪ್ರಾಧ್ಯಾಪಕರು

ಕನ್ನಡ ವಿಭಾಗ

ಹೆಚ್.ಪಿ.ಪಿ.ಸಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ, ಕರ್ನಾಟಕ ರಾಜ್ಯ,

**ಪೀಠಿಕೆ**

ಗ್ರಾಮೀಣ ಪ್ರದೇಶದ ಜಾನಪದ ಶೈಲಿ, ಹಳ್ಳಿ ಬದುಕಿನ ಆಚಾರ ವಿಚಾರ ಸಂಸ್ಕೃತಿ, ವಿಭಿನ್ನ ಜೀವನ ಶೈಲಿ ಅದೊಂದು ಅದ್ಭುತವೇ ಸರಿ. ಅಂದಿನ ಸಂಸ್ಕೃತಿ ಇಂದಿನ ಆಧುನಿಕತೆ ಇವೆರಡರ ನಡುವೆ ಇರುವುದು ವ್ಯತ್ಯಾಸ ಮಾತ್ರ ಒಂದೇ, ಸಂಸ್ಕೃತಿ ಹೆಚ್ಚು ಆದ್ಯತೆ ನೀಡಿದ್ದು ಅಂದು, ಆದರೆ ಇಂದು ಬದಲಾಗುವ ಆಧುನಿಕತೆಗೆ ಹೆಚ್ಚು ಆದ್ಯತೆ ನೀಡುತ್ತಿವೆ. ಅತೀಯಾದ ನಾಗರಿಕತೆಗೆ ಮಾರು ಹೋದ ಮನುಷ್ಯ ಬದಲಾವಣೆ ಎಂಬುದಕ್ಕೇ ಮನಸೋತಂತಿದೆ. ಹೀಗೆ ನೋಡುತ್ತಾ ಹೋದರೆ ಗ್ರಾಮೀಣ ಪ್ರದೇಶದ ಜನರು ಅಂದಿನ ಕಾಲಕ್ಕೆ ಇವತ್ತಿನ ದಿನಕ್ಕೆ ಅವರೇನು ಯಾವುದಕ್ಕೂ ಕಮ್ಮಿ ಇರಲಿಲ್ಲ. ಅದಕ್ಕೆ ಬೇಕಾದ ಕುರುವು ನಮಗೆ ಕಾಣಸಿಗುತ್ತವೆ. ಅವರದ್ದೇ ಆದ ಶೈಲಿಯ ವಿವಿಧ ರೀತಿಯ ಆಟಗಳು ಅವತ್ತಿನ ದಿನಕ್ಕೆ ಪ್ರಚಲಿತದಲ್ಲಿದವು. ಆಟವೆಂದು ಕೂಡಲೇ ಹೊರಾಂಗಣ ಆಟ ಕಬಡ್ಡಿ ಲಗೋರಿ, ಮರಕೋತಿ, ಚಿನ್ನೀ ದಾಂಡು, ಹುಲಿ ದನ, ಕುಂಟೆಬಿಲ್ಲೆ, ಕಣ್ಣ ಮುಚ್ಚಾಲೆ, ಶುಕ್ರ ಚಂಡು ಹೀಗೆ ಹತ್ತಾರು. ಹೀಗೆ ಒಳಾಂಗಣ ಆಟಗಳೆಂದರೆ ಛಂದೇ ಮನೆ, ಅಳಗುಳಿ ಮನೆ, ಅಂಚಿ ಬಿಂಚಿ, ಎತ್ತೈಲ್ ಅಟ ಹೀಗೆ ಹುಡುಕುತ್ತಾ ಹೋದರೆ ಆಟಗಳು ಹತ್ತಾರು. ಇವು ಮನರಂಜನೆಯ ಜತೆಗೆ ಮನುಷ್ಯನ ದೈಹಿಕ ಸಾಮರ್ಥಯ ಮತ್ತು ಮನಸ್ಥಿತಿಗಳನ್ನು ಹಿಡಿತದಲ್ಲಿಟ್ಟುಕೊಳ್ಳಲು ಒಂದು ರೀತಿಯ ಸಹಾಯವನ್ನು ಮಾಡುತ್ತಿದ್ದವು. ಅಂದಿನ ಗ್ರಾಮೀಣ ಬದುಕಿನ ಜನರಿಗೆ ಈ ಆಟಗಳು ಒಂದು ವಿಶಿಷ್ಟ ಲೋಕವನ್ನು ಸೃಷ್ಟಿಸುತ್ತಿದ್ದವು. ಮಕ್ಕಳು ಬಾಲ್ಯದ ದಿನಗಳಲ್ಲಿ ಈ ಆಟಗಳನ್ನ ಆಡುತ್ತ ಬೆಳೆಯುತ್ತಿದ್ದರು ಮತ್ತು ಇವೆ ಅವತ್ತಿನ ದಿನಕ್ಕೆ ಸ್ಪರ್ಧೆಗಳ ಪ್ರೀತಿಯಲ್ಲಿ ನಡೆಯುತ್ತಿದ್ದವು. ಆದರೆ ಮನುಷ್ಯ ಜೀವನ ಶೈಲಿಯ ಪ್ರಭಾವ ದಿಂದಾಗಿ ಇತ್ತೀಚಿನ ದಿನಗಳಲ್ಲಿ ಪಾಶ್ಚಿಮಾತ್ಯ ದೇಶದ ವಿವಿಧ ಮಾದರಿಯ ಆಟಗಳಿಗೆ ಮಾರು ಹೋಗಿ ಅವುಗಳು ಬೆನ್ನು ಹತ್ತಿರುವುದು ಮಾತ್ರ ಶೋಚನೀಯ. ಎಲ್ಲ ಆಟಗಳು ಇತ್ತೀಚಿನ ದಿನಗಳಲ್ಲಿ ಮನರಂಜನೆ ಹೊರತುಪಡಿಸಿ ಇವರದ್ದೇ ಆದಂತ ಒಂದು ವ್ಯವಹಾರಿಕ ಮಾರ್ಗವಾಗಿ ರೂಪಗೊಂಡಿವೆ. ಇನ್ನು ಕೆಲವು ಸ್ಪರ್ಧೆಗಳು, ಅವು ಕೇವಲ ಸ್ಪರ್ಧೆಯಾಗಿಲ್ಲ. ಅದು ಚಿನ್ನದ ಮೊಟ್ಟೆ ಇಡುವ ವ್ಯವಹಾರವಾಗಿ ರೂಪಗೊಂಡಿವೆ. ಈ ರೀತಿಯ ವಿದೇಶಿ ಆಟಗಳಿಗೆ ನವ ಜಗತ್ತಿನ ಜನ ಸಮೂಹ ಮಾರುಹೋಗಿದ್ದಾರೆ. ಅತೀಯಾದ ನಗರೀಕರಣ, ಜಾಗತೀಕರಣ ಮತ್ತು ಎಲ್ಲವೂ ಬೆರಳ ತುದಿಯಲ್ಲಿ ಆಗುವ

ತಂತ್ರಜ್ಞಾನ ಕ್ಷೇತ್ರದಲ್ಲಿನ ಮಾರ್ಪಾಡುಗಳು ಎಲ್ಲ ಆಟಗಳನ್ನು ವ್ಯವಹಾರದ ದೃಷ್ಟಿಯಿಂದ ನೋಡಲಾಗುತ್ತಿದೆ. ಹಣಗಳಿಸುವ ಮೂಲ ಉದ್ದೇಶವಾಗಿ ಬೆಳೆಯುತ್ತಿರುವುದು ಗ್ರಾಮೀಣ ಪ್ರದೇಶದ ಈ ಆಟಗಳು ನಶಿಸಿ ಹೋಗಲು ಮುಖ್ಯ ಕಾರಣ ಎನ್ನಬಹುದು.

**ಬುಗುರಿ:**

ಈ ಆಟವನ್ನು ಸಾಮಾನ್ಯವಾಗಿ ಗಂಡು ಮಕ್ಕಳು ಹಳ್ಳಿಗಳಲ್ಲಿ ಬುಗುರಿ ಆಟವನ್ನು ಹೆಚ್ಚಾಗಿಆಡುತ್ತಾರೆ. ಈ ಬುಗುರಿ ಆಟಕ್ಕೆ ಇತಿಹಾಸದ ಹಿನ್ನೆಲೆ ಸಮೃದ್ದಿಯಾಗಿ ಮಹಾಭಾರತ ಕಥೆಯಲ್ಲಿಪಾಂಡವರು ಮತ್ತು ಕೌರವರು ಆಟದ ಸನ್ನಿವೇಶದಲ್ಲಿ ಕಾಣಿಸುತ್ತದೆ. ಹಳ್ಳಿಗಳಲ್ಲಿ ಈಗಲೂಕೆಲುವು ಕಡೆ ಈ ಆಟದ ಕುರುಹು ಕಾಣಬರುತ್ತದೆ. ಉದಾ: ಗೌರಿಬಿದನೂರಿನ ತಾಲೂಕಿನ ಮಂಚೇನಹಳ್ಳಿಯಾ " ಭೀಮನ ಬುಗುರಿ

**ಆಟದನಿಯಮ:**

ಮೊದಲುಹುಡಗರು ಬುಗುರಿಯನ್ನು ದಾರದಿಂದ ಹೊಸೆದ ಚಾಟಿಯನ್ನು ಸುತ್ತಿ ಆಟದಲ್ಲಿ ಇರುವ ಹುಡುಗುರುಬಂಗರವನ್ನು ಸ್ಪರ್ಶಿಸಿ ತಕ್ಷಣ ನೆಲಕ್ಕೆ ಹಾಕಿ ನಂತರ ಚಾಟಿಯ ಸಹಾಯದಿಂದ ಯಾರು ಕೈಯಲ್ಲಿಹಿಡಿಯುತ್ತಾರೋ, ಅವರು ಆಟ ಆಡಲು ಸಿದ್ದವಾಗುತ್ತಾರೆ. ಅಂತಿಮವ ಬುಗುರಿಯನ್ನು ನೆಲದಲ್ಲಿಇಡುತ್ತಾನೆ. ಮಿಕ್ಕವರು ನೆಲದಲ್ಲಿ ಬಿದ್ದ ಬುಗುರಿಗೆ ಗುರಿ ಇಟ್ಟು ಹೋಡೆದು ಗುನ್ನ(ತೂತು) ಮಾಡುತ್ತಾರೆ. ಹೀಗೆಯೇ ಆಟ ಮುಂದುವರೆಯುತ್ತದೆ. ಈ ಆಟದಲ್ಲಿ ಬುಗುರಿಗಳು ಎರಡುಹೋಳು ಆಗುವುದು ಸರ್ವೇ ಸಾಮಾನ್ಯ. ನೆಲಕ್ಕೆ ಬುಗುರಿ ಬೀಳದ ಹಾಗೆ ಕೈಯಲ್ಲಿ ಹಿಡಿದರೆಅದಕ್ಕೆ "ಅಂತರ ಮಂಗ" ಎನ್ನುತ್ತಾರೆ. ಆಟಗಾರನ ಅನುಭವದಿಂದ ಬುಗುರಿಯನ್ನು ಅನೇಕ ರೀತಿಆಡಿಸುತ್ತಾನೆ.

**ಬಳೆಚೂರಿನ ಆಟ:**

ಸಾಮಾನ್ಯವಾಗಿ ಇಬ್ಬರು ಹೆಣ್ಣುಮಕ್ಕಳು ಕೂಡಿ ಆಡುವ ಒಳಾಂಗಣ ಆಟ. ಒಡೆದ ಬಳೆಗಳಚೂರುಗಳನ್ನು ಸಂಗ್ರಹಿಸಿ ಇಬ್ಬರೂ ಸಮನಾಗಿ ಹಂಚಿಕೊಂಡು, ಆಟಕ್ಕೆ ಇಂತಿಷ್ಟು ಎಂದುನಿಗದಿಪಡಿಸಿಕೊಂಡು ಆಡುತ್ತಾರೆ. ಆಟದಲ್ಲಿ ಬಳಸುವ ಬಳೆಚೂರುಗಳನ್ನು ಒಟ್ಟುಗೂಡಿಸಿ ನೆಲದಮೇಲಿಟ್ಟು ಬಾಯಿಂದ ಜೋರಾಗಿ ಗಾಳಿ ಊದಿದಾಗ ಆ ಬಳೆಚೂರುಗಳು ಎಲ್ಲೆಡೆ ಚದುರುತ್ತವೆ. ಹೀಗೆಚದುರಿದ ಬಳೆ ಚೂರುಗಳನ್ನು ಒಂದು ಮತ್ತೊಂದಕ್ಕೆ ತಗುಲದಂತೆ ಆಯ್ದುಕೊಳ್ಳಬೇಕು.ಅಕಸ್ಮಾತ್ ತಗುಲಿದ ಪಕ್ಷದಲ್ಲಿ ಅವರು ಸೋತಂತೆ, ಮುಂದಿನವರು ಆಡುವರು. ಹೀಗೆ ಕೊನೆಯವರೆಗೂಆಡುವಾಗ ಯಾರು ಹೆಚ್ಚು ಬಳೆಯ ಚೂರುಗಳನ್ನು ಗೆಲ್ಲುತ್ತಾರೋ ಅವರೇ ಜಯಶಾಲಿಗಳು.

**ಉಪ್ಪೇರುಆಟ:**

ಹೆಣ್ಣುಮಕ್ಕಳಆಟ. ಐದಾರು ಜನ ಮಕ್ಕಳು ಸೇರಿಕೊಂಡು ಮನೆಯ ಒಳಗಿನ ಮೂಲೆಗಳನ್ನು ಇಲ್ಲವೆ ಕಂಬಗಳನ್ನುಬಳಸಿಕೊಂಡು ಉಪ್ಪೇರುಪ್ಪ ಆಡುತ್ತಾರೆ. ಮೊದಲು ಉಪ್ಪು ಬೇಡುವವರನ್ನು ನಿರ್ಧರಿಸಲುಎಲ್ಲರೂ ಒಟ್ಟಿಗೆ ಸೇರಿ ವೃತ್ತಾಕಾರವಾಗಿ ನಿಂತುಕೊಂಡು ಎಣಿಕೆಯ ಮೂಲಕನಿರ್ಣಯಿಸುತ್ತಾರೆ. ಚಕ್ಕೀ, ಮಕ್ಕೀ, ಪಾಕ, ಕೂಕ, ಪರಂಗ್, ಲಾಟ್ ಲೂಟ್ ಚಲ್ ಎಂದುಎಣಿಕೆ ಮಾಡುವಾಗ ಚಲ್ ಎಂದು ನಿಲ್ಲಿಸಿದಾಗ ಅದು ಯಾರನ್ನು ನಿರ್ದೇಶಿಸುತ್ತದೆಯೋ ಅವರುಗೆದ್ದಂತೆ. ಹೀಗೆ ಎಲ್ಲರೂ ಗೆದ್ದು ಕೊನೆಯಲ್ಲಿ ಉಳಿಯುವವಳು ಉಪ್ಪು ಬೇಡಲು ಹೋಗಬೇಕು.ಗೆದ್ದವರೆಲ್ಲರೂ ಒಂದೊಂದು ಮೂಲೆಯನ್ನೋ ಅಥವಾ ಕಂಬವನ್ನೋ ಆಶ್ರಯಿಸಿ ನಿಲ್ಲುತ್ತಾರೆ.ಸೋತವಳು ಗೆದ್ದ ಪ್ರತಿಯೊಬ್ಬರ ಬಳಿಯೂ 'ಉಪ್ಪುಕೊಡಿ' ಎಂದು ಬೇಡುತ್ತಾ ಬರುತ್ತಾಳೆ.ಅವರು ಇಲ್ಲ ಮುಂದಿನ ಮನೆಗೆ ಹೋಗು ಎಂದು ಕಳುಹಿಸುತ್ತಾರೆ. ಉಪ್ಪು ಬೇಡಲು ಬರುವವಳು ಒಂದುಕಂಬದಿಂದ ಇನ್ನೊಂದು ಕಂಬದ ಬಳಿಗೆ ಬರುವಷ್ಟರಲ್ಲಿ ಗೆದ್ದವರು ಕಂಬಗಳನ್ನುಬದಲಾಯಿಸುತ್ತಾ ಅಂದರೆ ಸ್ಥಳ ಬದಲಾಯಿಸುತ್ತಿರುತ್ತಾರೆ. ಹೀಗೆ ಸ್ಥಳ ಬದಲಾವಣೆಸಂದರ್ಭದಲ್ಲಿ ಉಪ್ಪು ಬೇಡುವವಳು ಖಾಲಿಯಾದ ಸ್ಥಳವನ್ನು ಆಕ್ರಮಿಸಿದರೆ, ಆ ಸ್ಥಳಕ್ಕೆಬರಬೇಕಾದವಳು ಉಪ್ಪು ಬೇಡಲು ಹೋಗಬೇಕಾಗುತ್ತದೆ. ಹೀಗೆ ಎಲ್ಲರ ಸರದಿಯು ಬರುವವರೆಗೂಉಪ್ಪೇರುಪ್ಪ ಆಟವು ನಡೆಯುತ್ತಿರುತ್ತದೆ. ಮಕ್ಕಳಲ್ಲಿ ತ್ವರಿತ ಚಲನೆಯ ಗತಿಯನ್ನುರೂಢಿಸುವ ಸಲುವಾಗಿ ಹುಟ್ಟಿಕೊಂಡಿರುವ ಈ ಆಟವು ಶಿವಮೊಗ್ಗ, ಚಿಕ್ಕಮಗಳೂರು ಭಾಗಗಳಲ್ಲಿಕಂಡು ಬರುತ್ತದೆ.

**ಚಿನ್ನಿದಾಂಡು ಆಟ:**

ಚಿನ್ನಿದಾಂಡು ಅಥವಾ ಗಿಲ್ಲಿ ದಾಂಡು ಅಥವಾ ಹಾಣೆ ಗೆಂಡೆ ಅಥವಾ ಚಿನ್ನಿ ಕೋಲು ಒಂದು ಜನಪ್ರಿಯಗ್ರಾಮೀಣ ಆಟ. ಇದರಲ್ಲಿ ಮರದ ಕೋಲಿನಿಂದ ಮಾಡಿದ ಒಂದು ಚಿಕ್ಕ ಚಿನ್ನಿ ಅಥವಾ ಗಿಲ್ಲಿಅಥವಾ ಹಾಣೆ ಮತ್ತು ಸ್ವಲ್ಪ ದೊಡ್ಡದಾದ ಒಂದು ದಾಂಡು ಅಥವಾ ಕೋಲು ಇವುಗಳ ಸಹಾಯದಿಂದಆಡಲಾಗುತ್ತದೆ . ಇದನ್ನು ವೈಯಕ್ತಿಕವಾಗಿ ಅಥವಾ ತಂಡಗಳಾಗಿ ಆಡಬಹುದು.ಆಡಲುಸಾಕಷ್ಟು ಜಾಗ. ಸುಮಾರು ಒಂದು ಗೇಣು ಉದ್ದದ ನೆಲದ ಮೇಲೆ ಕೊರೆದ ಒಂದು ಗುಂಡಿ / ಕುಳಿ /ಉಳ್ಳ. ಗುಂಡಿಯಷ್ಟೇ ಉದ್ದವಾದ ಮರದ ಕೋಲಿನಿಂದ ಮಾಡಿದ ಚಿನ್ನಿ / ಹಾಣೆ / ಗಿಲ್ಲಿ. ಇದರಎರಡೂ ಬದಿ ಚೂಪಾಗಿರಬೇಕು. ಚಿನ್ನಿಗಿಂತ ಕನಿಷ್ಠ ಎರಡೂವರೆ-ಮೂರು ಪಟ್ಟು ಉದ್ದವಾದ, ಮರದಕೋಲಿನಿಂದ ಮಾಡಿದ ನೇರವಾದ ದಾಂಡು.ಆಟಗಾರನು ಗುಂಡಿಯ ಮೇಲೆ ಅಡ್ಡವಾಗಿಚಿನ್ನಿಯನ್ನು ಇಡಬೇಕು. ಎದುರು ತಂಡದ ಆಟಗಾರರು ಸನ್ನದ್ಧರಾಗಿರುವುದನ್ನು ತಿಳಿಯಲು ಹೋಎಂದು ಕೂಗುವ ರೂಢಿಯಿದೆ. ಎದುರು ತಂಡದವರು ಹೋ ಎಂದು ಉತ್ತರಿಸಿದ ಮೇಲೆ ಚಿನ್ನಿಯಕೆಳಭಾಗದಲ್ಲಿ ದಾಂಡನ್ನಿಟ್ಟು ಚಿನ್ನಿಯನ್ನು ಆದಷ್ಟು ದೂರ ಚಿಮ್ಮಬೇಕು. ನೆಲಕ್ಕೆ ಬೀಳುವಮೊದಲು ಅದನ್ನು ಎದುರು ತಂಡದ ಆಟಗಾರರು ಹಿಡಿಯಬಹುದು. ಹೀಗೆ ಹಿಡಿದರೆ ಆಟಗಾರ ತನ್ನಪಾಳಿ ಕಳೆದುಕೊಂಡಂತೆ. ಎದುರು ತಂಡದವರಿಗೆ ಅದನ್ನು ಹಿಡಿಯಲಾಗದಿದ್ದರೆ ದಾಂಡನ್ನುಗುಂಡಿಯಿಂದ

ಒಂದು ದಾಂಡಿನಷ್ಟು ದೂರ ಹಿಂದೆ ಇಡಬೇಕು. ಎದುರು ತಂಡದ ಯಾವುದಾದರೂ (ಅಥವಾಚಿನ್ನಿ ಬಿದ್ದ ಸ್ಥಳಕ್ಕೆ ಹತ್ತಿರವಿದ್ದ) ಆಟಗಾರ ಅದಕ್ಕೆ ಚಿನ್ನಿ ಬಿದ್ದ ಸ್ಥಳದಿಂದಹೊಡೆಯಬೇಕು. ಚಿನ್ನಿ ದಾಂಡಿಗೆ ಮುಟ್ಟಿದರೆ ಆಟಗಾರ ತನ್ನ ಪಾಳಿಯನ್ನು ಕಳೆದುಕೊಂಡಂತೆ.ಚಿನ್ನಿ ಗುಂಡಿಯ ಒಳಗೆ ಬಿದ್ದರೆ ಕೂಡ ಆಟಗಾರ ತನ್ನ ಪಾಳಿಯನ್ನು ಕಳೆದುಕೊಂಡಂತೆ. ಚಿನ್ನಿಗುಂಡಿಯಿಂದ ಒಂದು ಚಿನ್ನಿಯಷ್ಟು ದೂರದಲ್ಲಿ ಬಿದ್ದರೆ ಆಟಗಾರ ಎಡಗೈಯಲ್ಲಿ ಆಟಮುಂದುವರೆಸಬೇಕು. ಆಟಗಾರನು ಚಿನ್ನಿಯನ್ನು ದಾಂಡಿನಿಂದ ಮೇಲಕ್ಕೆ ಚಿಮ್ಮಿಸಿ ಚಿನ್ನಿಗಾಳಿಯಲ್ಲಿರುವಾಗ ಅದಕ್ಕೆ ಹೊಡೆಯಬೇಕು. ಗಾಳಿಯಲ್ಲಿರುವಾಗ ಎಷ್ಟು ಸಲ ಬೇಕಾದರೂಹೊಡೆಯಬಹುದು. ಹೀಗೆ ಮೇಲೆ ಚಿಮ್ಮಿಸಿದಾಗ ಎದುರು ತಂಡದ ಆಟಗಾರರು ಚಿನ್ನಿಯನ್ನುಹಿಡಿದರೆ ಆಟಗಾರ ತನ್ನ ಪಾಳಿ ಕಳೆದುಕೊಂಡಂತೆ. ಮೂರು ಬಾರಿ ಚಿನ್ನಿಯನ್ನು ಹೀಗೆಹೊಡೆಯಲಾಗದಿದ್ದರೆ ಆಟಗಾರ ಪಾಳಿ ಕಳೆದುಕೊಂಡಂತೆ. ಚಿನ್ನಿಯನ್ನು ಎರಡಕ್ಕಿಂತ ಹೆಚ್ಚುಬಾರಿ ಹೊಡೆದರೆ ಗಿಲ್ಲಿ ಎಂದು ಕರೆಯಲಾಗುತ್ತದೆ.

**ಅಣಿಕಲ್ಲಾಟ:**

ಹೆಣ್ಣುಮಕ್ಕಳುಆಡುವ ಒಳಾಂಗಣ ಆಟ. ಗಜ್ಜುಗದ ಗಾತ್ರ ಇರುವ ದುಂಡನೆಯ ಐದು ಕಲ್ಲುಗಳಿಂದ ಎಷ್ಟು ಜನರಾದರೂಈ ಆಟವನ್ನು ಆಡಬಹುದು. ಎರಡು ಕಲ್ಲುಗಳಿಗೆ ಒಂದು 'ಅಚ್ಚು' ಎಂದು ಕರೆಯುವುದರಿಂದ ಈಆಟಕ್ಕೆ ಅಚ್ಚ ಕಲ್ಲಾಟ ಎಂಬ ಹೆಸರೂ ಇದೆ. ಆಟ ಆರಂಭಿಸುವ ಆಟಗಾರ್ತಿ ಮೊದಲು ಐದುಕಲ್ಲುಗಳನ್ನು ಕೈಯೊಳಗಿನ ಮುಷ್ಟಿಯಲ್ಲಿ ಹಿಡಿದು ಕುಲುಕಿ ನೆಲದ ಮೇಲೆ ಎಸೆಯುತ್ತಾಳೆ.ನಂತರ ಐದರಲ್ಲಿ ಒಂದು ಕಲ್ಲನ್ನು ಮೇಲಕ್ಕೆಸೆದು ಅದು ಕೆಳಗೆ ಬೀಳುವಷ್ಟರಲ್ಲಿ, ನೆಲದಮೇಲಿನ ಉಳಿದ ನಾಲ್ಕರಿಂದ ಒಂದು ಕಲ್ಲನ್ನು ಎತ್ತಿಕೊಂಡು ಬೀಳುತ್ತಿರುವ ಕಲ್ಲನ್ನುಹಿಡಿದುಕೊಳ್ಳುತ್ತಾಳೆ. ಮೇಲಿಂದ ಬೀಳುವ ಕಲ್ಲು ಕೈ ತಪ್ಪಿದರೆ ಆಟ ಸೋತಂತೆ. ಇದೇ ರೀತಿಐದು ಸಲ ಆಡುವುದಕ್ಕೆ ಒಂದು ಗುಚ್ಚಿ ಆಟ ಎನ್ನುತ್ತಾರೆ. ಇಂತಹ ಐದು ಗುಚ್ಚಿ ಆಟಗಳನ್ನುಆಡುವರು. ಇದಾದ ನಂತರ ಎರಡು ಕಲ್ಲು, ಮೂರು ಕಲ್ಲು, ನಾಲ್ಕು ಕಲ್ಲುಗಳನ್ನು ಒಟ್ಟೊಟ್ಟಿಗೆಎತ್ತಿಕೊಳ್ಳುವರು. ಕೊನೆಯಲ್ಲಿ ಐದು ಕಲ್ಲುಗಳನ್ನು ಮೇಲೆಸೆದು ಬೊಗಸೆಯಲ್ಲಿಹಿಡಿದುಕೊಳ್ಳುವರು. ಅಣ್ಣe ಕಲ್ಲಾಟ ಆಡುವಾಗ ಕಲ್ಲಿಗೆ ಕಲ್ಲು, ಕೈಗೆ ಕೈ ತಾಗಬಾರದು.ಮೇಲೆ ಎಸೆಯುವ ಕಲ್ಲು ಕೆಳಗೆ ಬೀಳಬಾರದು. ಹಸ್ತ ಮತ್ತು ಬೆರಳುಗಳಿಗೆ ಅತ್ಯುತ್ತಮವಾಗಿವ್ಯಾಯಾಮವನ್ನು ಒದಗಿಸುವ ಈ ಆಟದಲ್ಲಿ ಗುದ್ದಿನ ಆಟ, ಗೆದಿಯುವ ಆಟ, ಸೆಣೆಯುವಆಟ,ಗಿಚ್ಚಿಯಾಟ, ಐದು ಗುಂಜು ಆಟ ಮೊದಲಾದ ಬಗೆಗಳಿವೆ.

**ಚೆಂಡಾಟ**

ಗಂಡುಮಕ್ಕಳಹೊರಾಂಗಣ ಆಟ. ಚೆಂಡಾಟದಲ್ಲಿ ಲಗ್ಗ ಚೆಂಡು, ಜೋಡಿ ಚೆಂಡು, ಗಾರು ಚೆಂಡು, ಸೂರುಚೆಂಡು, ರಾಮ ಚೆಂಡು, ಲಗೋರಿ, ಕುದುರೆ ಚೆಂಡು, ಬೂರ್ ಬೂರ್ ಚೆಂಡು, ಟಾಂಗ್ ಬಿರಾಂಗ್,ಹರಚೆಂಡು (ಧಪ್ಪಾಧುಪ್ಪಿ)

ಮುಂತಾದ ಬಗೆಗಳಿವೆ. ಚೆಂಡಾಟದಲ್ಲಿ ಮಕ್ಕಳು ಮತ್ತು ದೊಡ್ಡವರುಪ್ರತ್ಯೇಕವಾಗಿ, ಕೆಲವೊಮ್ಮೆ ಇಬ್ಬರೂ ಸೇರಿ ಆಡುವುದುಂಟು. ಚೆಂಡಾಟವಾಡಲು ಸಮತಟ್ಟಾದವಿಶಾಲ ಬಯಲು ಒಳ್ಳೆಯದು. ಚೆಂಡಾಟದಲ್ಲಿ ಯಾವಾಗಲೂ ಎರಡು ಪಕ್ಷಗಳಿರುತ್ತವೆ.ಸಮಸಂಖ್ಯೆಯಲ್ಲಿರುತ್ತದೆ. ಟಾಸ್ ಹಾಕಿ ಯಾರು ಮೊದಲು ಆಟ ಆಡಬೇಕುನ್ನುವುದನ್ನುನಿರ್ಧರಿಸಲಾಗುತ್ತದೆ. ಚೆಂಡನ್ನು ಹೊಡೆಯುವವರು ಮತ್ತು ಚೆಂಡನ್ನು ಕಾಯುವವರು ಹೀಗೆ ಎರಡುಪಕ್ಷಗಳು.

**ಕೆರೆ-ದಂಡೆ ಆಟ**

ಹೆಣ್ಣುಮತ್ತು ಗಂಡು ಮಕ್ಕಳ ಹೊರಾಂಗಣ ಆಟ. ದೇಹ ಮತ್ತು ಮನಸ್ಸುಗಳಿಗೆ ಏಕಕಾಲಕ್ಕೆ ವ್ಯಾಯಾಮನೀಡುವಂತಹ ವಿಶಿಷ್ಟವಾದ ಆಟ. ಮಕ್ಕಳು ಗುಂಪುಗಳಲ್ಲಿ ಇಲ್ಲವೆ ಒಬ್ಬೊಬ್ಬರೇ ನಿಂತುಕೊಂಡು ಈಆಟ ಆಡುತ್ತಾರೆ. ನಿಗದಿಪಡಿಸಿದ ಜಾಗದಲ್ಲಿ ಒಂದು ಉದ್ದನೆಯ ಅಡ್ಡಗೆರೆ ಎಳೆದು, ಆಚೆಬದಿಯನ್ನು ಕೆರೆ ಎಂದು, ಈಚೆ ಬದಿಯನ್ನು ದಂಡೆ ಎಂದು ಗುರುತು ಮಾಡುತ್ತಾರೆ. ಮೊದಲುದಂಡೆಯ ಬದಿಯಲ್ಲಿ ನಿಲ್ಲುತ್ತಾರೆ. ಮತ್ತೊಂದು ಗುಂಪಿನವರು ಕೆರೆ-ದಂಡೆ ಎಂದುಸೂಚಿಸುತ್ತಾ ಹೋಗುತ್ತಾರೆ. ಸೂಚನಾ ತಂಡದವರು ಕೆರೆ ಎಂದಾಗ ದಂಡೆಯ ಬದಿಯಲ್ಲಿ ನಿಂತವರುಕೆರೆಯ ಬದಿಗೂ ದಂಡೆ ಎಂದಾಗ ದಂಡೆಯ ಬದಿಗೂ ಜಿಗಿಯಬೇಕು. ಚಲನೆಯು ನಿಧಾನವಾಗಿ ಆರಂಭವಾಗಿಕ್ರಮೇಣ ವೇಗವನ್ನು ಏರಿಸಿಕೊಳ್ಳುತ್ತದೆ. ನಿರ್ದೇಶಿಸುವವರು ಮೊದಲು ನಿಧಾನವಾಗಿಕೆರೆ-ದಂಡೆ, ಕೆರೆ-ದಂಡೆ ಎಂದು ಹೇಳುತ್ತಾ ಕ್ರಮೇಣ ಆತುರಾತುರವಾಗಿ ನಿರ್ದೇಶಿಸುತ್ತಾರೆ.ಅಂತಹ ಸಂದರ್ಭದಲ್ಲಿ ಕೆರೆ-ದಂಡೆ ಎನ್ನುವ ಬದಲಾಗಿ, ಎದುರಾಳಿಗಳನ್ನು ದಿಕ್ಕು ತಪ್ಪಿಸುವಸಲುವಾಗಿ ಕೆರೆ-ಕೆರೆ ಅಥವಾ ದಂಡೆ-ದಂಡೆ ಎಂದೂ ಹೇಳುವುದುಂಟು. ಮೊದಲಿಗೆ ಕೆರೆ ಎಂದುಹೇಳಿದಾಗ ಕೆರೆಯ ಬದಿಗೆ ಜಿಗಿದಿದ್ದವರು ಎದುರು ತಂಡದವರು ಮತ್ತೆ ತಟ್ಟನೆ ಕೆರೆ ಎಂದಾಗದಂಡೆಯ ಬದಿಗೆ ಜಿಗಿದರೆ ಅಥವಾ ಕಾಲು ತೆಗೆದರೂ ಆಟದಿಂದ ಹೊರ ಬರಬೇಕು. ಎದುರಾಳಿಗಳು ಏನುಹೇಳುತ್ತಾರೆ ಎಂಬುದನ್ನು ಏಕಾಗ್ರತೆಯಿಂದ ಗ್ರಹಿಸುವ ಎಚ್ಚರವಿರಬೇಕು. ಕಿವಿಯಷ್ಟೇಚುರುಕಾಗಿ, ದೇಹದ ಇತರ ಅಂಗಾಂಗಗಳೂ ಚುರುಕಾಗಿರಬೇಕು. ಆಟದಲ್ಲಿ ತಲ್ಲೀನನಾಗುವುದಕ್ಕಿಂತಹೆಚ್ಚಾಗಿ ಮಾನಸಿಕ ಏಕಾಗ್ರತೆ ಕಾಪಾಡಿಕೊಳ್ಳಬೇಕು.

**ಕುಂಟಾಟ**

ವಿಶೇಷವಾಗಿಹುಡುಗಿಯರು ಆಡುವ ಆಟ. ಮನೆಯ ಮುಂದಿನ ಅಂಗಳ ಇಲ್ಲವೆ ಬಯಲಿನಲ್ಲಿ ಈ ಆಟವನ್ನುಆಡುತ್ತಾರೆ. ಪರಸ್ಪರ ಚಪ್ಪಾಳೆಗಳನ್ನು ಹಾಕುವ ಮೂಲಕ ಕಳ್ಳಿಯನ್ನು ನಿರ್ಣಯಿಸಿ,ನಿಗದಿಪಡಿಸಿದ ಅಂತರದಲ್ಲಿ ಎರಡು ಗೆರೆಗಳನ್ನು ಎಳೆಯುತ್ತಾರೆ. ಇದಕ್ಕೆ ಪಟ್ಟಿ ಅಥವಾಬೌಂಡರಿ ಎಂದು ಕರೆಯುವುದುಂಟು. ಕಳ್ಳಿಯಾದವಳು ಗೆರೆಯ ಹೊರಗೆ ನಿಂತುಕೊಂಡು ಜೂಟಾ ಎಂದುಕೇಳುತ್ತಾಳೆ. ಉಳಿದವರು ಗೆರೆಯ ಒಳಗಡೆ ಇದ್ದು

ಜೂಟ್ ಎನ್ನುತ್ತಾರೆ. ಕಳ್ಳಿಯ ಎಡಗಾಲುಇಲ್ಲವೆ ಬಲಗಾಲನ್ನು ತುಸು ಮೇಲಕ್ಕೆತ್ತಿ ಕುಂಟುತ್ತಾ ಗೆರೆ ಒಳಗಿನ ಆಟಗಾರರನ್ನುಹಿಡಿಯಲು ಗಡಿಯ ಒಳಕ್ಕೆ ಬರುತ್ತಾಳೆ. ಆಟಗಾರರು ಕುಂಟಿಯ ಕೈಗೆ ಸಿಗದೆ ಗೆರೆಯ ಒಳಗಡೆಯೇಓಡಾಡುತ್ತಾರೆ. ಕಳ್ಳಿಯು ಯಾರನ್ನಾದರೂ ಮುಟ್ಟಿಸಿದರೆ, ಮುಟ್ಟಿಸಿಕೊಂಡವರು ಕಳ್ಳರಾಗಿಕುಂಟಲಾರಂಭಿಸುತ್ತಾರೆ. ಒಂದು ವೇಳೆ ಆಟಗಾರರು ಗೆರೆ ದಾಟಿದರೂ ಕಳ್ಳರಾಗುತ್ತಾರೆ.ಕಳ್ಳಿಯು ಕುಂಟುವಾಗ ಕಾಲನ್ನು ನೆಲಕ್ಕೆ ತಗುಲಿಸಬಾರದು. ಕಾಲನ್ನು ಬದಲಿಸಿಕುಂಟುವಂತಿಲ್ಲ. ಒಂದೇ ಕಡೆ ಎಷ್ಟು ಹೊತ್ತಾದರೂ ನಿಲ್ಲಕೂಡದು. ಕಳ್ಳಿಯು ಈ ನಿಯಮಗಳನ್ನುಮೀರಿದರೆ ಆಟ ಕೊನೆಯಾಗುತ್ತದೆ. ಮತ್ತೆ ಹೊಸದಾಗಿ ಕಳ್ಳಿಯಾದವಳು ಆಟ ಪ್ರಾರಂಭಮಾಡುತ್ತಾಳೆ.

**ಕಂಬ ಆಟ**

ಬೆಂಗಳೂರಿನ ಗ್ರಾಮಾಂತರ ಪ್ರದೇಶಗಳಲ್ಲಿ ಗಂಡುಮಕ್ಕಳು ಆಡುವ ಹೊರಾಂಗಣ ಆಟ. ಈಆಟದಲ್ಲಿ ಎಷ್ಟು ಜನ ಬೇಕಾದರೂ ಪಾಲ್ಗೊಳ್ಳಬಹುದು. ಅವರ ಬಳಿ ಚೂಪು ತುದಿಯುಳ್ಳ ತುಸುಉದ್ದನೆಯ ಕಬ್ಬಿಣದ ಕಂಬಿ ಇರಬೇಕು. ಚೆನ್ನಾಗಿ ನೆನೆದ ಆದರೆ ಕೆಸರಾಗದಂತಹ ತೇವವುಳ್ಳಸ್ಥಳವೇ ಈ ಆಟಕ್ಕೆ ಕ್ರೀಡಾಂಗಣ. ಇಂತಹ ಸ್ಥಳದಲ್ಲಿ ಒಂದು ವೃತ್ತವನ್ನು ಬರೆದು, ಆಟದಲ್ಲಿಪಾಲ್ಗೊಳ್ಳುವ ಆಟಗಾರರೆಲ್ಲರೂ ತಮ್ಮ ಬಳಿ ಇರುವ ಕಬ್ಬಿಣದ ಕಂಬಿಯನ್ನು ವೃತ್ತದ ಒಳಗಿನನೆಲಕ್ಕೆ ಎಸೆದು ಕಚ್ಚಿಸಬೇಕು. ಕಂಬಿ ಎಸೆದಾಗ ಅದು ನೆಲಕ್ಕೆ ಕಚ್ಚಿಕೊಳ್ಳದಿದ್ದಲ್ಲಿ ಆಕಂಬಿಯವನು ಕಳ್ಳನಾಗಬೇಕು. ಆಮೇಲೆ ಉಳಿದ ಗೆದ್ದ ಆಟಗಾರರು ಒಬ್ಬೊಬ್ಬರಾಗಿ ಕಂಬಿಯನ್ನುನೆಲಕ್ಕೆ ಕಚ್ಚಿಸುತ್ತಾ ಮುಂದೆ ಮುಂದೆ ಸಾಗುವರು. ಕಂಬಿ ಕಚ್ಚಿಸುತ್ತಾ ಹೋಗುವಾಗ ಎಲ್ಲಿಕಂಬಿ ನೆಲಕ್ಕೆ ಕಚ್ಚಿಕೊಳ್ಳುವುದಿಲ್ಲವೋ ಆಗ ಆ ಕಂಬಿ ಎಸೆದವನ ಆಟ ಹೋಗಿ ಮತ್ತೊಬ್ಬನುಅಲ್ಲಿಂದ ಮುಂದಕ್ಕೆ ಅದೇ ರೀತಿಯಲ್ಲಿ, ಕಂಬಿ ಕಚ್ಚಿಸುತ್ತಾ ಮುಂದುವರಿಯುತ್ತಾನೆ. ಇದೇರೀತಿ ಗೆದ್ದವರೆಲ್ಲರೂ ನೆಲಕ್ಕೆ ಕಂಬಿ ಕಚ್ಚಿಸುವುದು ಮುಗಿದ ಮೇಲೆ, ಕಂಬಿ ಕಚ್ಚಿಸುವುದುಎಲ್ಲಿಗೆ ನಿಂತಿರುತ್ತದೆಯೋ ಅಲ್ಲಿಂದ ಹಿಡಿದು ಕಂಬಿ ಕಚ್ಚಿಸುವುದನ್ನು ಪ್ರಾರಂಭಿಸಿದವೃತ್ತದವರೆಗೂ ಕಳ್ಳನಾದವನು ಕುಂಟಿಕೊಂಡು ಬರಬೇಕು. ಅಲ್ಲಿಗೆ ಆಟ ಮುಕ್ತಾಯ, ಮತ್ತೆಮೊದಲಿನಂತೆ ಆಟ ಆರಂಭ.

**ಉಪ್ಪುಪ್ಪು ಕಡ್ಡಿ**

ಗಂಡುಮಕ್ಕಳು-ಹೆಣ್ಣುಮಕ್ಕಳು ಪ್ರತ್ಯೇಕವಾಗಿ ಕೆಲವೊಮ್ಮೆ ಇಬ್ಬರೂ ಸೇರಿ ಆಡುವ ಆಟವಿದು.ಮರಳಿನ ರಾಶಿ ಇರುವಂತಹ ಹೊಳೆ ದಡ, ನದಿ ಬಯಲು, ಕೆರೆ ದಂಡೆಗಳಲ್ಲಿ ಹೆಚ್ಚಾಗಿರೂಢಿಯಲ್ಲಿರುವ ಹೊರಾಂಗಣ ಆಟ. ಇಬ್ಬರು ಆಟಗಾರರು ಎದುರುಬದುರಾಗಿ ಕುಳಿತು ಮರಳಿನಲ್ಲಿಒಂದು ಮೊಳದುದ್ದದ ಗುಪ್ಪೆ ಕಟ್ಟುತ್ತಾರೆ. ಆಟ ಆಡುವವರು ಬಲಗೈಯಲ್ಲಿ ಬೆರಳುದ್ದದಕಡ್ಡಿಯೊಂದನ್ನು ಹಿಡಿದು ಆ ಗುಪ್ಪೆಯೊಳಗೆ ಹೊರಗೆ ಕಾಣದಂತೆ ಬಚ್ಚಿಡುತ್ತಾರೆ. ಅನಂತರಮರಳಿನ ಮೇಲುಭಾಗವನ್ನು ಚೆನ್ನಾಗಿ ಸವರಿ ಸಮಮಾಡುತ್ತಾರೆ. ತಮ್ಮ ಎರಡೂ ಕೈಗಳಬೆರಳುಗಳನ್ನು

ಹೆಣೆದುಕೊಂಡು ಹಸ್ತದ ಕೆಳಭಾಗದಿಂದ ಮರಳ ಒಂದು ಭಾಗವನ್ನು ಮುಚ್ಚುತ್ತಾರೆ.ಎದುರಾಳಿ ಆಟಗಾರರು ಅವಿತಿರಿಸಿದ ಕಡ್ಡಿಯನ್ನು ಆ ಮರಳ ಗುಪ್ಪೆಯಿಂದ ಹುಡುಕಿಹೊರತೆಗೆಯಬೇಕು. ಅಡಗಿಸಿರುವ ಕಡ್ಡಿಯು ಹಸ್ತಗಳು ಮುಚ್ಚಿರುವ ಭಾಗದಲ್ಲಿದ್ದರೆ ಅವರುಗೆದ್ದಂತೆ. ಕಡ್ಡಿ ಅಲ್ಲಿರದಿದ್ದರೆ, ಕಡ್ಡಿ ಅಡಗಿಸಿಟ್ಟವರು ಮರಳಗುಪ್ಪೆಯಿಂದ ಅದನ್ನುಹೊರತೆಗೆದು, ಸೋತವರ ಕೈಗಳ ಬೊಗಸೆ ತುಂಬಾ ಮರಳು ತುಂಬಿ, ಅದರ ಮಧ್ಯಭಾಗಕ್ಕೆ ಎಂಜಲುಉಗಿದು, ಅಲ್ಲಿ ಕಡ್ಡಿಯನ್ನು ನೆಟ್ಟಗೆ ನಿಲ್ಲಿಸಿ, ಅವರ ಕಣ್ಣುಗಳನ್ನು ತಮ್ಮ ಎರಡೂಕೈಗಳಿಂದ ಬಿಗಿಯಾಗಿ ಮುಚ್ಚಿ, ಅಲ್ಲಿ-ಇಲ್ಲಿ ತಿರುಗಾಡಿಸಿ ಎಲ್ಲೋ ಒಂದು ಕಡೆಬೊಗಸೆಯಲ್ಲಿದ್ದ ಮರಳನ್ನು ಸುರಿಯಲು ಹೇಳುತ್ತಾರೆ. ಅವರನ್ನು ಮತ್ತೆ ಅಲ್ಲಿಂದಿಲ್ಲಿಸುತ್ತಾಡಿಸಿ ಮೊದಲಿನ ಜಾಗಕ್ಕೆ ಕರೆತಂದು ಕಣ್ಣು ಮುಚ್ಚಿದ ಕೈಗಳನ್ನು ಬಿಟ್ಟು, ಕಡ್ಡಿಹುಡುಕಿ ತರಲು ಸೂಚಿಸುತ್ತಾರೆ. ಸೋತವನು ತಾನು ಮರಳು ಸುರಿದ ಸ್ಥಳವನ್ನು ಪತ್ತೆ ಹಚ್ಚಿಕಡ್ಡಿ ಹುಡುಕಿ ತಂದರೆ ಮತ್ತೆ ಮೊದಲಿನಿಂದ ಆಟ ಆರಂಭ. ಇಲ್ಲವಾದರೆ, ಮೊದಲೇನಿಗದಿಪಡಿಸಿದಂತೆ ಸೋತವನು ಗೆದ್ದವನ ಕೈಗಳಿಂದ ಅಷ್ಟೂ ಬಾರಿ ಕಣ್ಣುಮುಚ್ಚಿಸಿಕೊಳ್ಳಬೇಕಾಗುತ್ತದೆ. ಬೆಂಗಳೂರಿನ ಗ್ರಾಮಾಂತರ ಪ್ರದೇಶಗಳಲ್ಲಿಉಪ್ಪುಪ್ಪುಕಡ್ಡಿ ಆಟ ಆಡುವ ಸಂದರ್ಭದಲ್ಲಿ:

**ಬಗಾಟ ಬಗರಿ**

ಉತ್ತರಕರ್ನಾಟಕದ ಗ್ರಾಮೀಣ ಪ್ರದೇಶಗಳಲ್ಲಿ ಕಂಡು ಬರುವ ಹೆಣ್ಣುಮಕ್ಕಳ ಆಟ. ಬಗಾಟ ಬಗರಿಗೆಪುಗಡಿ ಆಟ, ಸಕ್ಕಸರಗಿ, ಉದ್ದುದ್ದಾ ಮುಂತಾದ ಹೆಸರುಗಳಿವೆ. ಇಬ್ಬರು ಹುಡುಗಿಯರು ಎದುರುಬದುರು ನಿಂತು ದೇಹವನ್ನು ತುಸು ಹಿಂದಕ್ಕೆ ಬಾಗಿಸಿ ಒಬ್ಬರ ಕೈ ಬೆರಳುಗಳನ್ನು ಮತ್ತೊಬ್ಬರಕೈಬೆರಳುಗಳೊಂದಿಗೆ ಕತ್ತರಿಯಾಕಾರದಲ್ಲಿ ಹೆಣೆದುಕೊಂಡುದುಂಡಗೆ ತಿರುಗುತ್ತಾಗಿರಗಿಟ್ಟಳೆ ಆಡುತ್ತಾರೆ. ಆಟದೊಂದಿಗೆ ಹಾಡು ಬೆರೆತುಕೊಳ್ಳುತ್ತದೆ.ಬಗಾಟ ಬಗರಿ ಆಡೋಣ ಬಾಬಣ್ಣದ ಚವರಿ ಬೀಸೋಣ ಬಾದೇವರಗಿ ಹೋಗ್ತೀನಿ ದಂಡಿ ತಾತಂಬ್ಕೊಂಡ ಹೋಗ್ತೀನಿ ಗಿಂಡಿ ತಾಕಟ್ಟಿ ಮ್ಯಾಲ ಕರ | ಉತ್ರತ್ತಿ ಸರಗಿರಿಗಿರಿ ಗಿಂಡಿ | ಈಬತ್ತಿ ಉಂಡಿಉತ್ತರ ಕರ್ನಾಟದಲ್ಲಿ ಪ್ರಚಲಿತದಲ್ಲಿರುವ ಬಗಾಟ ಬಗರಿ ಆಟವನ್ನೇ ಹೋಲುವ ದಕ್ಷಿಣಕರ್ನಾಟಕದಲ್ಲಿ ರೂಢಿಯಲ್ಲಿರುವ ಆಟಕ್ಕೆ ಕುಕ್ಕುರು ಬಸವಿ ಎಂದು ಕರೆಯುತ್ತಾರೆ. ಇಲ್ಲಿಯೂಹೆಣ್ಣು ಮಕ್ಕಳದೇ ಪ್ರಾಧಾನ್ಯತೆ. ಕತ್ತರಿಯಾಕಾರದಲ್ಲಿ ತಮ್ಮ ಕೈಗಳ ಬೆರಳುಗಳನ್ನುಹೆಣೆದುಕೊಂಡು ದೇಹವನ್ನು ಹಿಂದಕ್ಕೆ ಬಾಗಿಸಿ ವೃತ್ತಾಕಾರದಲ್ಲಿ ತಿರುಗುವುದನ್ನು ಕಂಡಾಗನೋಡುಗರ ಮನಸ್ಸನ್ನು ಸೆಳೆಯುತ್ತದೆ. ಕುಕ್ಕುರು ಬಸವಿ ಆಟದೊಂದಿಗೆ ಕೆಳಕಂಡ ಹಾಡುಹಾಡುತ್ತಾರೆ. ರತ್ತೋ ರತ್ತೋ ರಾಯನ ಮಗಳೆಬಿತ್ತೋ ಬಿತ್ತೋ ಭೀಮನ ಮಗಳೆ

ಹದಿನಾರೆಮ್ಮ ಕರೆಯಲಾರೆ ಕಾಯ್ಸಲಾರೆಬೈಟು ಕಂಬ ಬಾಳೇ ಕಂಬಕುಕ್ಕುರು ಬಸವಿ ಕೂರೇ ಬಸವಿ.

**ಟೋಪಿಯಾಟ**

ಹೆಣ್ಣುಮತ್ತು ಗಂಡು ಮಕ್ಕಳು ಪ್ರತ್ಯೇಕವಾಗಿ ಅಥವಾ ಉಭಯರೂ ಕೂಡಿ ಆಡಬಹುದಾದ ಆಟ. ನಾಲ್ಕಕ್ಕಿಂತಹೆಚ್ಚು ಮಂದಿ ಇರುತ್ತಾರೆ. ಆಟಗಾರರು ವೃತ್ತಾಕಾರದಲ್ಲಿ ತಲೆತಗ್ಗಿಸಿಕುಳಿತುಕೊಳ್ಳುತ್ತಾರೆ. ಆಟಗಾರರಲ್ಲಿ ಒಬ್ಬ ಒಂದು ಟೋಪಿ ಅಥವಾ ಬಟ್ಟೆಯ ತುಂಡನ್ನುತೆಗೆದುಕೊಂಡು ವೃತ್ತಾಕಾರವಾಗಿ ತಲೆತಗ್ಗಿಸಿ ಕುಳಿತುವರನ್ನು ಮೂರು-ನಾಲ್ಕು ಬಾರಿಸುತ್ತುಹಾಕಿ ಅನುಮಾನ ಬರದಂತೆ ಯಾರಾದರೊಬ್ಬರ ಬೆನ್ನ ಹಿಂದೆ ಇಡುತ್ತಾನೆ. ಅನಂತರ ಮತ್ತೆಒಂದೆರಡು ಸುತ್ತು ಬಂದು ತನ್ನ ಜಾಗಕ್ಕೆ ಹೋಗಿ ಕೂರುತ್ತಾನೆ. ಒಂದೆರಡು ಕ್ಷಣಗಳವರೆಗೂಎಲ್ಲವೂ ನಿಶ್ಯಬ್ದ. ಟೋಪಿಯು ಯಾರ ಹಿಂದೆ ಇದೆಯೋ ಅವನು ಅದನ್ನು ಗುರುತಿಸಿ ಏಳದಿದ್ದರೆ,ಟೋಪಿ ಹಾಕಿದವನೇ ಎದ್ದು ಅವನ ಬಳಿ ಹೋಗಿ ಟೋಪಿಯಿಂದ ಅವನ ಬೆನ್ನಿನ ಮೇಲೆ ರಪ್ ರಪ್ ಎಂದುಬಾರಿಸುತ್ತಾನೆ. ಟೋಪಿಯಿಂದ ಹೊಡೆಸಿಕೊಳ್ಳುವ ಆಟಗಾರ ಒಂದು ಸುತ್ತು ಬಂದು ಮತ್ತೆ ತನ್ನಸ್ಥಳದಲ್ಲಿ ಕುಳಿತುಕೊಳ್ಳುತ್ತಾನೆ.

**ಆನೆಕುರಿಆಟ**

ಕರ್ನಾಟಕದಾದ್ಯಂತಜನಪ್ರಿಯವಾಗಿರುವ ಆಟ. ಹೆಣ್ಣು ಗಂಡೆಂಬ ಭೇದವಿಲ್ಲದೆ ಮನೆಯ ಒಳಗೆ ಮತ್ತು ಹೊರಗೆ ಎಲ್ಲಿಯಾರು ಬೇಕಾದರೂ ಆಡಬಹುದು. ಒಂದು ಬಾರಿಗೆ ಇಬ್ಬರು ಆಡುವ ಆಟ. ಸರಳ, ಸಂಕೀರ್ಣ,ಚಾಣಾಕ್ಷತೆಯಿಂದ ಕೂಡಿದ ಈ ಆಟದಲ್ಲಿ ಒಬ್ಬರಿಗೆ ಮೂರು ಆನೆ ಮತ್ತೊಬ್ಬರಿಗೆ ಇಪ್ಪತ್ತುಕುರಿ. ಘಟ್ಟಾಬಾರದ ರೀತಿಯಲ್ಲಿ ಮನೆಗಳನ್ನು ಬರೆದುಕೊಂಡು, ಆನೆ ಮತ್ತು ಕುರಿಗಳಸಂಕೇತವಾಗಿ ಸಣ್ಣ ಕಲ್ಲಿನ ಹರಳುಗಳನ್ನು ಇರಿಸಿಕೊಂಡು, ಮನೆಯಿಂದ ಮನೆಗೆ ದಾಟುವಾಗ ಮತ್ತುಹಾಕುವಾಗ ಸೋಲು-ಗೆಲುವುಗಳು ಸಂಭವಿಸುತ್ತವೆ. ಆನೆ ಗಾತ್ರದಲ್ಲಿ ದೊಡ್ಡದು. ಕುರಿ ತೀರಾಸಣ್ಣದು. ಆನೆ ಮಾಂಸಾಹಾರಿಯಲ್ಲ; ಆದರೆ ಕುರಿಗಳನ್ನು ತುಳಿದು ಹಾಕಬಲ್ಲದು. ಆನೆಯಿಂದಕುರಿಗಳನ್ನು ರಕ್ಷಿಸಲು ಬೇಕಾದ ಯುಕ್ತಿ ಚಾತುರ್ಯವನ್ನು ಆನೆ ಕುರಿ ಆಟಕಲಿಸಿಕೊಡುತ್ತದೆ. ಹುಲಿಕುರಿ ಆಟವೂ ಸಹ ಇದೇ ತೆರನಾದ ಆಶಯವನ್ನುಳ್ಳ ಮತ್ತೊಂದು ಜನಪದಆಟ.

**ಕಾಗೆ–ಗಿಳಿಆಟ**

ಕಾಗೆ-ಗಿಳಿಆಟವುತುಳುನಾಡಿನಾದ್ಯಂತ ಮಕ್ಕಳ ಆಟಗಳಲ್ಲಿ ಅತ್ಯಂತ ಜನಪ್ರಿಯವಾದ ಆಟವಾಗಿರುತ್ತದೆ. ಈಆಟಕ್ಕೆ ಎಂಜಲು ಕುಪ್ಪಿ, ಕೊರ್ಸ -ಭಟ್ರು, ಉಬ್ಬಿದ ಕಡ್ಯ (ಉಗುಳುವ ಪಾತ್ರೆ) ಮುಂತಾದಹೆಸರುಗಳೂ ಉಂಟು. ನಿರ್ದಿಷ್ಟ ಸ್ಥಳವೊಂದರಲ್ಲಿ ಸೇರಿದ ಮಕ್ಕಳು ಗುಂಪುಗೂಡಿ ಯಾರು ಗಿಳಿಯಾರು ಕಾಗೆ ಎಂಬುದನ್ನು ಮೊದಲು ನಿಷ್ಕರ್ಷಿಸುತ್ತಾರೆ. ಎರಡು ಬೆರಳುಗಳನ್ನುವೃತ್ತಾಕಾರವಾಗಿ ಮಡಿಚಿ ಅದರ ಮಧ್ಯೆ ಉಗುಳುತ್ತಾರೆ. ಉಗುಳು ಬೆರಳಿಗೆ ಬಿದ್ದವ ಕಾಗೆಬೆರಳಿಗೆ ಬೀಳದವ ಗಿಳಿಯಾಗುತ್ತಾನೆ. ಈ ಆಟದಲ್ಲಿ ಇಷ್ಟೇ ಮಕ್ಕಳು ಭಾಗವಹಿಸಬೇಕೆಂಬನಿಯಮವೇನಿಲ್ಲ. ಎಷ್ಟು ಮಕ್ಕಳಾದರೂ ಪಾಲ್ಗೊಳ್ಳಬಹುದು. ಕಾಗೆ-ಗಿಳಿಗಳ ಆಯ್ಕೆ ಪ್ರಕ್ರಿಯೆಮುಗಿದ ನಂತರ ಕಾಗೆಗಳದೇ ಒಂದು ಗುಂಪು

ಗಿಳಿಗಳದೇ ಒಂದು ಗುಂಪು. ಕಾಗೆಗಳು ಗಿಳಿಗಳನ್ನುಮುಟ್ಟಬಾರದು. ಗಿಲಿಗಳೂ ಸಹ ಕಾಗೆಗಳಿಂದ ಮುಟ್ಟಿಸಿಕೊಳ್ಳಲು ಇಚ್ಚಿಸುವುದಿಲ್ಲ. ಗಿಳಿಗಳುಕಾಗೆಗಳನ್ನು ಹಿಯಾಳಿಸುವುದು, ಕಾಗೆಗಳು ಅದಕ್ಕೆ ವಿಭಿನ್ನ ರೀತಿಯಲ್ಲಿಪ್ರತಿಕ್ರಿಯಿಸುವುದು ನಡೆಯುತ್ತದೆ.

**ಚನ್ನೆಮಣೆಯಾಟ**

ಹೆಣ್ಣುಮಕ್ಕಳಿಗೆ ಬಹು ಪ್ರಿಯವಾದ ಚನ್ನೆಮಣೆ ಆಟವಂತೂ ಕರ್ನಾಟಕದಲ್ಲಷ್ಟೇ ಅಲ್ಲ,ಆಫ್ರಿಕಾದಿಂದ ಫಿಲಿಪೈನ್ಸ್‌ವರೆಗೂ ಜನಪ್ರಿಯವಾಗಿರುವ ಜನಪದ ಆಟ. ಅಳಗುಳಿಮಣೆ, ಪತ್ತಾಮಣೆ,ಹರಳುಮಣೆ, ಸೀತೆಮಣೆ ಮೊದಲಾದ ಹೆಸರುಗಳಿಂದ ಗುರುತಿಲ್ಪಡುವ ಚನ್ನೆಮಣೆಯನ್ನು ಮರದಿಂದಕೆತ್ತಿರುತ್ತಾರೆ. ಒಂದು ಸಾಲಿನಲ್ಲಿ ಏಳೇಳು ಮಣೆಗಳಂತೆ ಎರಡು ಸಾಲುಗಳುಳ್ಳ ಮಣೆಯನ್ನುಆಟ ಮುಗಿದ ನಂತರ ಪೆಟ್ಟಿಗೆಯ ರೀತಿಯಲ್ಲಿ ಮಡಚಿ ಇಡಬಹುದು. ರಾವಣನು ಕದ್ದೊಯ್ದ ಸೀತೆಯುರಾಮನ ಆಗಮನವನ್ನು ನಿರೀಕ್ಷಿಸುತ್ತಾ ಕಾಲ ಕಳೆಯುವ ಸಲುವಾಗಿ ಅಶೋಕವನದಲ್ಲಿ ಒಬ್ಬಳೇ ಈಆಟವನ್ನು ಆಡುತ್ತಿದ್ದರಿಂದ ಈ ಆಟಕ್ಕೆ ಸೀತೆಯಾಟ ಎಂದೂ ಹೆಸರಿದೆ. ತುಳುನಾಡಿನ ಧಾರ್ಮಿಕಮತ್ತು ಸಾಂಸ್ಕೃತಿಕ ಬದುಕಿನಲ್ಲಿ ಚನ್ನೆಮಣೆಯು ಹಾಸುಹೊಕ್ಕಾಗಿದೆ.

**ಉಪಸಂಹಾರ:**

ಕರ್ನಾಟಕದಲ್ಲಿ ಪ್ರಚಲಿತವಿರುವ ವ್ಯಾಪಕ, ಸಮೃದ್ಧ ಹಾಗೂ ವೈವಿಧ್ಯಮಯ ಜನಪದ ಆಟಗಳನ್ನು ಕುರಿತು ಈಗಾಗಲೇ ಹಲವಾರು ಮಂದಿ ವಿದ್ವಾಂಸರು ಅಧ್ಯಯನ ನಡೆಸಿರುತ್ತಾರೆ. ಸುಶೀಲ ಹೊನ್ನೇಗೌಡ, ಶಾಂತಿನಾಯಕ, ಎನ್.ಆರ್. ನಾಯಕ, ವಿ.ಕೆ.ಜವಳಿ, ಮಲ್ಲಿಕಾರ್ಜುನ ಲಶ್ಕೆ, ಅರವಿಂದ ಮಾಲಗತ್ತಿ, ರಾಗೌ, ಗಣನಾಥ ಎಕ್ಕಾರು ಇವರಲ್ಲಿ ಮುಖ್ಯರು. ಆದರೆ ಆಟಗಳನ್ನು ಕುರಿತಾದಂತೆ ಅಂತರ್ ಶಿಸ್ತೀಯ ನೆಲೆಯಲ್ಲಿ ಸಾಮಾಜಿಕವಾಗಿ, ಭೌಗೋಳಿಕವಾಗಿ, ಚಾರಿತ್ರಿಕವಾಗಿ, ಮನೋವೈಜ್ಞಾನಿಕ ನೆಲೆಗಳಲ್ಲಿ ಸಮಗ್ರ ಹಾಗೂ ತೌಲನಿಕ ಅಧ್ಯಯನದ ಅಗತ್ಯವಿದೆ. ಆಟಗಳನ್ನು ಅಧ್ಯಯನಕ್ಕೆ ಒಳಗುಮಾಡುವಾಗ ಪ್ರಾದೇಶಿಕ ಮಿತಿಗಷ್ಟೇ ಮೀಸಲಾಗದೆ ಜಾಗತಿಕ ಹಂತದಲ್ಲಿ ಅಧ್ಯಯನಿಸಬೇಕಾಗಿರುತ್ತದೆ. ಆಗಮಾತ್ರವೇ ಪ್ರತಿಯೊಂದು ಆಟದ ಸಾಮಾಜಿಕ-ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಅರಿಯಲು ಆಟಗಳು ಎಲ್ಲಿಯೂ ಯಾವ ನಾಗರೀಕತೆಯಲ್ಲಿಯೂ ಸಮಾನರೀತಿಯ ಬೆಳವಣಿಗೆಯನ್ನು ಸಾಧಿಸಿರುವುದಿಲ್ಲ. ಪ್ರಾದೇಶಿಕ ಹಿನ್ನೆಲೆಯಲ್ಲಿ ಧಾರ್ಮಿಕ ಆಚರಣೆಗಳು, ಸಾಮಾಜಿಕ ರೀತಿ ರಿವಾಜುಗಳು, ರಾಜಕೀಯ ಸ್ಥಿತ್ಯಂತರಗಳನ್ನು ಅವಲಂಬಿಸಿ ಸಮುದಾಯವು ಆಟಗಳನ್ನು ರೂಪಿಸಿಕೊಂಡು ಬಂದಿರುತ್ತದೆ. ಕಾಲ ಕಳೆದಂತೆಲ್ಲಾ ಸಮುದಾಯವು ಹುಟ್ಟುಹಾಕಿದ ಆಟಗಳಲ್ಲಿ ಕೆಲವು ಕೈಬಿಟ್ಟು ಹೋಗಿರುತ್ತವೆ. ಕೆಲವು ರೂಪಾಂತರಕ್ಕೊಳಗಾಗಿರುತ್ತವೆ. ಮತ್ತೆ ಕೆಲವು ಹೊಸದಾಗಿ ಹುಟ್ಟಿಕೊಂಡಿರುತ್ತವೆ. ಇತ್ತೀಚಿನ ದಿನಗಳಲ್ಲಿ ಮಾನವ ಶಾಸ್ತ್ರಜ್ಞರು. ಸಂಸ್ಕೃತಿ ತಜ್ಞರು. ಜನಪದ ಆಟಗಳನ್ನು ಸಾಂಸ್ಕೃತಿಕ ನೆಲೆಯಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ಜನಪದ

ಆಟಗಳು ಪದಾನವಾಗಿ ಮನರಂಜನೆಯ ಮಾದಮಗಳಾಗಿ ಕಂಡು ಬಂದರೂ ಆಟಗಳಿಗೂ ಸಂಸ್ಕೃತಿಗೂ ಅವಿನಾಭಾವವಾದ ಸಂಬAಧವಿದೆ. ಪ್ರಕೃತಿ ಮತ್ತು ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿ ಆಟಗಳು ಬೆಳೆದುಬಂದಿವೆ. ಸಂಸ್ಕೃತಿಯ ಎಲ್ಲಾ ಅಂಶಗಳನ್ನು ತನ್ನಲ್ಲಿ ಅಂತರ್ಗತಿಸಿಕೊAಡಿರುವ ಆಟಗಳನ್ನು ಮುಂದಿನ ತಲೆಮಾರಿಗೆ ದಾಖಲುಗೊಳಿಸಬೇಕಾದದ್ದು ಎಲ್ಲ ಪ್ರಜ್ಞಾವಂತರ ಕರ್ತವ್ಯವಾಗಬೇಕಿದೆ. ನಗರಗಳಲ್ಲಿನ ಅತ್ಯಾಧುನಿಕ ಕ್ರೀಡೆಗಳಿಗೆ ತರಬೇತಿ ಪಡೆದಂತಹ ಆಟಗಾರರ ಪಡೆಗಳಿವೆ. ಸುಸಜ್ಜಿತ ಕ್ರೀಡಾಂಗಣವಿದೆ. ಅತ್ಯಾಧುನಿಕ ಕ್ರೀಡಾ ಸಲಕರಣೆಗಳ ಲಭ್ಯತೆ ಇದೆ. ಎಲ್ಲಕ್ಕಿಂತ ಹೆಚ್ಚಾಗಿ ಆಟಗಾರರಿಗೆ ಕೈತುಂಬಾ ಹಣ ಸಿಗುತ್ತಿದೆ. ಆದರೆ ಯಾವ ಆರ್ಥಿಕ ಬೇಡಿಕೆಯೂ ಇರದೆ, ವಿಶಾಲ. ಆಶಯಗಳು, ಉದಾತ್ತ ಧ್ಯೇಯಗಳನ್ನು ಹೊಂದಿರುವ ಜನಪದ ಆಟಗಳು ಗ್ರಾಮೀಣ ಬದುಕಿನಲ್ಲಿ ಹಾಸುಹೊಕ್ಕಾಗಿ ಆದಿಮಕಾಲದಿಂದಲೂ ಉಳಿದುಕೊಂಡು ಬಂದಿವೆ. ಬದಲಾಗುತ್ತಿರುವ ಪರಿಸರ, ಮನೋಧರದ ಫಲವಾಗಿ ಜನಪದ ಆಟಗಳು ಕೈತಪ್ಪಿ ಹೋಗುವ ಮೊದಲು ಅವುಗಳನ್ನು ಉಳಿಸಬೇಕಿದೆ. ಮುಂದಿನ ಮಕ್ಕಳಿಗೆ ಕಲಿಸಬೇಕಿದೆ. ಈ ದಿಸೆಯಲ್ಲಿ ಸರ್ಕಾರ, ಕ್ರೀಡಾ ಇಲಾಖೆಗಳು, ಸಂಘ ಸಂಸ್ಥೆಗಳು ಸಜ್ಜಾಗಬೇಕಿದೆ.

**ಪರಾಮರ್ಶನಾ ಗ್ರಂಥಗಳು**

೧. ಸಂ. ಸುಶೀಲ ಹೊನ್ನೇಗೌಡ - ಜನಪದ ಆಟಗಳು, ಶರತ್ ಪ್ರಕಾಶನ, ಮಂಡ್ಯ, ೧೯೭೯.

೨. ಸಂ. ಎನ್.ಆರ್. ನಾಯಕ; ಶಾಂತಿನಾಯಕ-ಉತ್ತರಕನ್ನಡ ಜಿಲ್ಲೆಯ ಜನಪದ ಆಟಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೧೯೮೧

೩. ಸಂ. ಮಲ್ಲಿಕಾರ್ಜುನ ಲಕ್ಕೆ-ಚುಕ್ಕೋಳ ಪದಗಳು, ಸತೀಶ ಪ್ರಕಾಶನ, ಕಲಬುರ್ಗಿ, ೧೯೭೬.

೪. ಅರವಿಂದ ಮಾಲಗತ್ತಿ - ಉತ್ತರ ಕರ್ನಾಟಕದ ಜನಪದ ಆಟಗಳು, ಅಪ್ರಕಟಿತ ಮಹಾಪ್ರಬಂಧ- ೧೯೮೫.

೫. ಡಾ. ಗಣನಾಥ ಎಕ್ಕಾರು - ತುಳುನಾಡಿನ ಜನಪದ ಆಟಗಳು. ಜ್ಞಾನೋದಯ ಪ್ರಕಾಶನ, ಬೆಂಗಳೂರು ೨೦೦೦.

೬. ದೇಜಗೌ - ಜಾನಪದ ವಾಹಿನಿ ಪು.೧೪.

೭. ಎಂ.ಎಸ್.ಲಠ್ಠೆ: ಕರ್ನಾಟಕ ಜಾನಪದ ಸಮೀಕ್ಷೆ, ಪು.೩೨೧.